ಶ್ರೀ ಲಕ್ಷ್ಮೀ ನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ಇಲ್ಲ

ಆ) ' ಅ ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ನಿಲುಗಡೆ ಆಗುತ್ತಿರುವ ಬಗ್ಗೆ.

೮೫೩. ಶ್ರೀ ನಿನಯಕುಮಾರ್ ಸೊರಕೆ (ಪುತ್ತೂರು).—ಮಾನ್ಯ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿದ್ಯುತ್ ಪೂರೈಕೆಯಲ್ಲಿ ಆಗುವ ವಿದ್ಯುತ್ ನಿಲುಗಡೆಗೆ ಕಾರಣ ವೇನು ?

ಆ) ವಿದ್ಯುತ್ ನಿಲುಗಡೆಯಿಂದಾಗಿ ರೈತರಿಗೆ ತೊಂದರೆ ಉಂಟಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಈ ತೊಂದರೆಯನ್ನು ನಿವಾರಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಲಕ್ಷ್ಮೀನರಸಿಂಹಯ್ಯ (ವಿದ್ಯುತ್ ಮಂತ್ರಿಗಳು).—

ಅ) ರಾಜ್ಯದಾದ್ಯಂತ ನಿಯಮಿತ ಆವಧಿಯ ಲೋಡ್ ಷೆಡ್ಡಿಂಗ್ ಮಾಡುತ್ತಿರುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲೂ ವಿದ್ಯುತ್ ನಿಲುಗಡೆ ಆಗುತ್ತಿದೆ.

ಆ) ಈ ಲೋಡ್ ಷೆಡ್ಡಿಂಗ್ ಇದ್ದರೂ ರೈತರಿಗೆ ದಿನದಲ್ಲಿ ೧೭ ಘಂಟೆಗಳ ಕಾಲವೂ ದಿನದ ಹಗಲಿನಲ್ಲಿ ೬ ಘಂಟೆಗಳ ಕಾಲವೂ ಸತತ ವಿದ್ಯುತ್ ಪೂರೈಕೆ ಇರುವುದು ಲೋಡ್ ಷೆಡ್ಡಿಂಗ್ ಅನಿವಾರ್ಯವಾದುದರಿಂದ ಇದನ್ನು ತೊಂದರೆ ಎಂದು ಭಾವಿಸಲಾಗುವುದಿಲ್ಲ.

ಇ) ಲೋಡ್ ಷೆಡ್ಡಿಂಗ್ ಅನಿವಾರ್ಯ ಮತ್ತು ಅತ್ಯಗತ್ಯವಾದುದರಿಂದ ಜನರಿಗೆ ತರಲಾಗಿರುವ ನಿಯಮಿತ ವೇಳೆಯನ್ನು ಎಲ್ಲಾ ವಿಷಯ ಪರಿಶೀಲಿಸಿ ನಿಗದಿ ಮಾಡಲಾಗಿದೆ. ಇದನ್ನು ನಿಲ್ಲಿಸಲು ಹಾಲಿ ಪರಿಸ್ಥಿತಿಯಲ್ಲಿ ಸಾಧ್ಯವಿಲ್ಲ. ಪೀಕ್ ಲೋಡ್ ಸ್ಥಿತಿ ಸುಧಾರಣೆಗೆ ಸ್ಟೇಷನ್ನುಗಳ ಓವರ್ ಲೋಡು ತಪ್ಪಿಸಲು ಅನೇಕ ಕ್ರಮ ಕೈಗೊಳ್ಳಲಾಗಿದೆ. ಅಗತ್ಯ ಕಂಡು ಬಂದ ಕಡೆಗಳಲ್ಲೆಲ್ಲಾ ಹಾಲಿ ಇರುವ ಸ್ಟೇಷನ್ನಿನ ಸಾಮರ್ಥ್ಯ ಹೆಚ್ಚಿಸಲಾಗುತ್ತಿದೆ. ಹೊಸ ಹೊಸ ಸ್ಟೇಷನ್ನುಗಳನ್ನು ಲೋಡು ಹತ್ತಿರ ಅಥವಾ ಲೋಡು ಸಾಂದ್ರತೆ ಇರುವಲ್ಲಿ ಸ್ಥಾಪಿಸಲಾಗುತ್ತಿದೆ. ಹೊಸ ವಿದ್ಯುತ್ ಮಾರ್ಗ ಹಾಕಲಾಗುತ್ತಿದೆ, ಇರುವ ವಿದ್ಯುತ್ ಮಾರ್ಗಗಳ ತಂತಿಗಳನ್ನು ಬಲಪಡಿಸಲಾಗುತ್ತಿದೆ (ಹೆಚ್ಚಿನ ಗಾತ್ರದ ತಂತಿಗಳನ್ನು ಹಾಕಿ ಹಳೆಯದನ್ನು ತೆಗೆಯಲಾಗುತ್ತದೆ) ವಿದ್ಯುತ್ ಉತ್ಪಾದನೆ ಹೆಚ್ಚಿಸಲೂ ಕ್ರಮ ಕೈಗೊಳ್ಳಲಾಗಿದೆ,

ದಿನಾಂಕ ೩೧-೩-೧೯೮೯ರ ಚುಕ್ಕೆ ಗುರುತಿನ ಪ್ರಶ್ನೋತ್ತರಗಳು (೧೪ ನೇ ಪಟ್ಟಿ)

ತಮಿಳುನಾಡಿಗೆ ನಡೆಸುವ ಬಸ್ಸು ಮಾರ್ಗಗಳು

೮೩೧ ಶ್ರೀ ಜೆ. ಎ. ಫರ್ನಾಂಡಿಸ್, (ನಾಮ ನಿರ್ದೇಶನ ಹೊಂದಿದವರು).—ಮಾನ್ಯ ಸಾರಿಗೆ ಮಂತ್ರಿಗಳು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಂತರ ರಾಜ್ಯ ಮಾರ್ಗಗಳಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ಓಡಿಸುತ್ತಿರುವ ಮಾರ್ಗಗಳೆಷ್ಟು ?

ಆ) ಬೆಂಗಳೂರಿನಿಂದ ತಮಿಳುನಾಡಿನ ವಿವಿಧ ಸ್ಥಳಗಳಿಗೆ ಓಡಿಸುತ್ತಿರುವ ಮಾರ್ಗಗಳೆಷ್ಟು ?

ಇ) ತಮಿಳುನಾಡು ಸಾರಿಗೆ ಸಂಸ್ಥೆಗಳು ಬೆಂಗಳೂರಿಗೆ ಓಡಿಸುತ್ತಿರುವ ಮಾರ್ಗಗಳು ಎಷ್ಟು ?

ಈ) ಅಂತರ ರಾಜ್ಯ ಸಾರಿಗೆ ಒಪ್ಪಂದವು ರಾಜ್ಯದ ಹಿತಕ್ಕೆ ಧಕ್ಕೆಯಾಗುವ ರೀತಿಯಲ್ಲಿ ಇದೆಯೆಂಬುದು ನಿಜವೇ ?